ಕುಳಿತುಕೊಳ್ಳಿ. ಏನೆಂದರೆ, ಅನೇಕ ಜನ ಸದಸ್ಯರು ಇದೇ ವಿಚಾರಕ್ಕೆ ಸಂಬಂಧಿಸಿದಂತೆ ನೋಟೀಸ್ ಕೊಟ್ಟಿದ್ದಾರೆ. ನಾನು ಅವರಿಗೆ ಅವಕಾಶ ಒದಗಿಸುತ್ತೇನೆ, ತಾವು ಉತ್ತರ ಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಇಂದಿನ ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ. ಯಾರ ಯಾರ ಇಲಾಖೆಗೆ ಸಂಬಂಧಪಟ್ಟಿದ್ದು ಇದೆ, ಇದನ್ನು ಕೇಳಬಹುದು, ಇದರ ಬಗ್ಗೆ ಪ್ರಸ್ತಾಪ ಮಾಡಬಹುದು ಎನ್ನತಕ್ಕ ಅರಿವಾದರೂ ಈ ಇಲಾಖೆಯ ಜನರಿಗೆ ಇರಬೇಕು. ಏಕೆಂದರೆ, ಇದು ಪತ್ರಿಕೆಯ ಎಲ್ಲೋ ಒಂದು ಮೂಲೆಯಲ್ಲಿ ಬಂದಂತಾದ್ದು ಅಲ್ಲ. ಎಲ್ಲಾ ಪತ್ರಿಕೆಯ ಮುಖಪುಟದಲ್ಲಿ ಇದು ಪ್ರಸ್ತಾಪವಾಗಿದೆ. 4 ಜನ ಸತ್ತಿದ್ದಾರೆ, 18 ಜನ ಗಾಯಗೊಂಡಿದ್ದಾರೆ, ನೂರಾರು ಕುರಿಗಳು ಸತ್ತಿವೆ ಎಂಬುದು ಬಂದಿರುವಾಗ, ಇದು ಇನ್ನೂ ನಮ್ಮ ಗಮನಕ್ಕೇ ಬಂದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಬಿ.ಸೋಮಶೇಖರ್: ಜಿಲ್ಲಾಧಿಕಾರಿಗಳಿಂದ ವಿವರವಾದ ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಈಗಲೇ ದೂರವಾಣಿ ಮುಖಾಂತರ ಸಂಪರ್ಕ ಮಾಡಿ, ವಿವರವಾದ ವರದಿಯನ್ನು ಕಳುಹಿಸಿಕೊಡಿ ಎಂದು ಹೇಳುತ್ತೇನೆ. ಬಂದಮೇಲೆ ನಾನು ಹೇಳುತ್ತೇನೆ. ಗಮನಕ್ಕೆ ಬಂದಿಲ್ಲ ಎಂಬುದಲ್ಲ, ನಮ್ಮ ಗಮನಕ್ಕೆ ಬಂದಿದೆ. ಆದರೆ, ಅಂಕಿಅಂಶಗಳು ಬೇಕಾಗುತ್ತವೆ.

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ: ನ್ಯಾಚುರಲ್ ಕೆಲಮಿಟಿ ಫಂಡಿನಲ್ಲಿ ತಕ್ಷಣ ಅವರು ಕೊಡಲಿ What information he wants from the DC? What help they have extended? ಇವತ್ತಾಗಿದ್ದು ಅಲ್ಲ, ನಿನ್ನೆ ಆಗಿದೆ, ಅಧಿಕಾರಿಗಳು ಹೋಗಿರಬೇಕು, ಪತ್ರಿಕೆಯವರು ಹೋಗಿದ್ದಾರೆ, ಎಂದು ವರದಿ ಮಾಡಿದ್ದಾರೆ.

ಶ್ರೀ ಸೋಮಶೇಖರ್ (ಕಂದಾಯ ಸಚಿವರು): ಮಧ್ಯಾಹ್ನ ಬೇಕಾದರೆ ಉತ್ತರ ಹೇಳುತ್ತೇನೆ.

ಆ) ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ನಬಾರ್ಡಿನ 3ನೇ ಹಂತದಲ್ಲಿ ಎಲ್ಲಾ ರಸ್ತೆಗಳ ದುರಸ್ಥಿ ಕಾರ್ಯವನ್ನು ನಿರ್ಮಾಣ ನಿಗಮಕ್ಕೆ ವಹಿಸಿರುವುದು.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಅಧ್ಯಕ್ಷರೇ ತಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ನಬಾರ್ಡಿನ 3ನೇ ಹಂತದಲ್ಲಿ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಎಲ್ಲಾ ರಸ್ತೆಗಳನ್ನೂ ನಿರ್ಮಾಣ ನಿಗಮಕ್ಕೆ ನೀವು ವಹಿಸಿದ್ದೀರಿ. ಸ್ಪರ್ಧೆ ಉಂಟು ಮಾಡುವುದಕ್ಕಾಗಿ ನಿರ್ಮಾಣನಿಗಮಕ್ಕೂ ಟೆಂಡರ್ ಮೂಲಕ ಅಲ್ಲೊಂದು ಇಲ್ಲೊಂದು

ಕೆಲಸ ಕೊಡುವುದು ವಾಡಿಕೆ. ಆದರೆ ಸಾರಾಸಗಟಾಗಿ ಎಲ್ಲಾ ರಸ್ತೆಗಳನ್ನೂ ನಿಗಮಕ್ಕೆ ಕೊಟ್ಟರೆ ಏನು ಅರ್ಥ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನ್ನ ಕ್ಷೇತ್ರದ ಮೂರು ರಸ್ತೆಗಳನ್ನು ಎನ್‌ಟ್ರಸ್ಟ್ ಮಾಡಿದ್ದೀರಿ. ಇಲ್ಲೀವರೆಗೂ ಒಂದು ರಸ್ತೆಯ ಕೆಲಸ ಕೂಡ ಪ್ರಾರಂಭವಾಗಿಲ್ಲ. ನಿನ್ನೆ ಮೊನ್ನೆ ಒಂದು ರಸ್ತೆಯನ್ನು ಯಾರೋ ಪ್ರಾರಂಭ ಮಾಡಿದ್ದಾರೆ. ಅಲ್ಲೇ ಇರುವ ಸ್ಥಳೀಯ ಕಂಟ್ರಾಕ್ಟರ್‌ಗಳಿಗೆ, ಶಕ್ತಿ ಇಲ್ಲದೇ ಇರುವವರಿಗೆ ಅವರಿಗೇ ಎನ್‌ಟ್ರಸ್ಟ್ ಮಾಡಿ ಕೆಲಸ ಮಾಡಿಸುವ ಹಂತಕ್ಕೆ ನೀವು ಹೊರಟಾಗ ತಮಗೆ ಗೊತ್ತಿದೆ ಅಲ್ಲಿ ಖಂಡಿತವಾಗಿ ಕೆಲಸ ಆಗುವುದಿಲ್ಲವೆಂದು. ನನ್ನ ವಿನಂತಿ ಇಷ್ಟೇ: ನಿಗಮಕ್ಕೆ ವಹಿಸಿರುವ ಮೂರು ರಸ್ತೆಗಳಲ್ಲಿ ಇನ್ನೂ ಅಗ್ರಿಮೆಂಟ್ ಆಗದಿರುವ ಬುಕ್ಕಾಪಟ್ಟಣ ಮತ್ತು ತಾವರೇಕೆರೆ ರಸ್ತೆ ದಯಮಾಡಿ ಅವರಿಗೆ ವಹಿಸಬೇಡಿ, ಟೆಂಡರ್ ಮೂಲಕ ಕರೆಸಿ. ಮತ್ತು ನಿಗಮಕ್ಕೆ ನೀವು ವಹಿಸುವ ಔಚಿತ್ಯವೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರಿಗೆ ವರ್ಷಕ್ಕೆ 6 ಪರ್ಸೆಂಟ್ ಕಮಿಷನ್ ಕೊಡಬೇಕು, ಕೆಲಸ ಡಿಲೇ ಆದರೆ ಪ್ರತಿವರ್ಷ ಎಸ್ಕಲೇಶನ್‌ರೇಟೂ ಕೊಡಬೇಕಾದರೆ ಅದು ಸರ್ಕಾರಕ್ಕೆ ನಿಜವಾಗಲು ತುಂಬಾ ಹೊರೆಯಾಗುತ್ತದೆ. ನನ್ನ ಸಲಹೆ ಹೇಳುವುದಾದರೆ ಇದು ಭ್ರಷ್ಟಾಚಾರದ ಒಂದು ಕೂಪವಾಗಿದೆ. ಸಚಿವರಿಗೂ ಮನಸ್ಸಿಲ್ಲ, ನಾನು ಅವರೊಡನೆ ಅನೇಕ ಸಾರಿ ಮಾತನಾಡಿದಾಗ ನಿರ್ಮಾಣ ನಿಗಮಕ್ಕೆ ಕೊಡುವುದಕ್ಕೆ ನಿಮಗೆ ಆಸಕ್ತಿ ಇಲ್ಲ. ಆದರೂ ಕೆಲಸಗಳು ಎನ್‌ಟ್ರಸ್ಟಾಗುತ್ತಿರುವುದು ನೋಡಿದಾಗ ನಮಗೆ ಅನುಮಾನಕ್ಕೆ ಕಾರಣವಾಗುತ್ತದೆ. ದಯಮಾಡಿ ಈ ನಿಗಮವನ್ನು ಮುಚ್ಚುವುದು ಒಳ್ಳೆಯದೆಂದು ಸಲಹೆ ಕೊಟ್ಟು, ಬೇಕಾದರೆ ನೀವು ಕಾನೂನು ಸಡಿಲ ಮಾಡಿ ಬೇಗ ಟೆಂಡರ್ ಕರೆದು ಎನ್‌ಟ್ರಸ್ಟ್ ಮಾಡಿ ಮತ್ತು ಬುಕ್ಕಾಪಟ್ಟಣ-ತಾವರೆಕೆರೆ ರಸ್ತೆಯನ್ನು ದಯಮಾಡಿ ಅವರಿಗೆ ಕೊಡಬೇಡಿ ಎಂಬುದು ನನ್ನ ವಿನಂತಿ.

ಶ್ರೀ ಎಚ್.ಎನ್.ನಂಜೇಗೌಡ (ಬಸವನಗುಡಿ): ಅಧ್ಯಕ್ಷರೇ, ನಿರ್ಮಾಣ ನಿಗಮವನ್ನು ರಚಿಸಿದ್ದು ಕಂಟ್ರಾಕ್ಟರ್ಸೆಲ್ಲಾ ಸೇರಿಕೊಂಡು ಕಾಂಪ್ರಮೈಸ್ ಟೆಂಡರ್ ಮಾಡಿಕೊಂಡು ಸರ್ಕಾರವನ್ನು ಲೂಟಿ ಮಾಡುತ್ತಾರೆ ಅದನ್ನು ತಪ್ಪಿಸಬೇಕು ಎಂದು. ಕಾಂಪೀಟ್ ಮಾಡಿ ಟೆಂಡರ್ ಹಾಕುವುದಕ್ಕೆ ನಮ್ಮದೇ ಆದ ಒಂದು ಏಜೆನ್ಸಿ ಇರಲಿ ಎಂದು ನಾವು ಮಾಡಿದ್ದು. ಈಗಾಗಿರುವುದೇನೆಂದರೆ ಬೇಕಾದವರಿಗೆ ಕಂಟ್ರಾಕ್ಟ್ ಕೊಟ್ಟುಕೊಳ್ಳುವುದಕ್ಕೆ ಇದೊಂದು ಏಜೆನ್ಸಿ, ಅವರಿಗೆ ಕೊಡುವುದು ಅವರ ಮೂಲಕ ಬೇರೆಯವರಿಗೆ ಕೊಡಿಸುವುದು.

ಅಧ್ಯಕ್ಷರು: ನಂಜೇಗೌಡರೇ, ಅನುಭವಸ್ಥರು ಆಡಳಿತದಿಂದ ದೂರವಾದಾಗ ಇವೆಲ್ಲಾ ಆಗುತ್ತದೆ. ಬೇಕಾದರೆ ಮುಖ್ಯಮಂತ್ರಿಗಳನ್ನು ಕೇಳಿ ಹೌದೋ ಅಲ್ಲವೋ ಎಂದು.

ಶ್ರೀ ಸಿ.ಎಂ.ಉದಾಸಿ: ಅಧ್ಯಕ್ಷರೇ, ನಿರ್ಮಾಣ ನಿಗಮಕ್ಕೆ 290 ಕೋಟಿಗಳ ನಬಾರ್ಡ್

ರಸ್ತೆಗಳಲ್ಲಿ ಕೇವಲ 22 ಕೋಟಿಯ ಕಾಮಗಾರಿಗಳನ್ನು ಮಾತ್ರ ವಹಿಸಲಾಗಿದೆ. ಅದರಲ್ಲಿ ಸದಸ್ಯರ ಕ್ಷೇತ್ರದಲ್ಲಿ 3 ರಸ್ತೆಗಳನ್ನು ವಹಿಸಿಕೊಟ್ಟಿದ್ದೇವೆ. ಅವುಗಳಲ್ಲಿ ಎರಡು ರಸ್ತೆಗಳದ್ದು ಈಗಾಗಲೇ ಒಂದು ಕಿಮೀ, ಹೊಸಕೆರೆ-ಹುಲಿಕೆರೆಯಲ್ಲಿ ಒಂದು ಕಿಮೀ, ಬೆಳ್ಳಾರ-ಅಮರಾಪುರದಲ್ಲಿ 3 ಕಿಮೀ ಕೆಲಸ ನಡೆದಿದೆ. ಬುಕ್ಕಾಪಟ್ಟಣ ರಸ್ತೆಯನ್ನು ನಿಗಮಕ್ಕೆ ಕೊಡುವದು ಬೇಡ ಎಂದು ಹೇಳಿದ್ದಾರೆ ಅದನ್ನು ಮತ್ತೆ ಟೆಂಡರ್ ಕರೆದು ಟೆಂಡರ್‌ದಾರರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದರು, ಎಷ್ಟೋ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಬಂದಿರಬಹುದು, ಕಂಟ್ರಾಕ್ಟರ್ 15ರಿಂದ 20 ಪರ್ಸೆಂಟ್‌ವರೆಗೆ ಹೆಚ್ಚಿಗೆ ಹಣ ಹಾಕಿ ಟೆಂಡರ್ ಕರೆದ ಅನೇಕ ಉದಾಹರಣೆಗಳಿವೆ. ಆ ಕಾರಣದಿಂದ ತೀವ್ರಗತಿಯಿಂದ ಕೆಲಸವಾಗಬೇಕೆಂಬ ಉದ್ದೇಶದಿಂದ ನಿರ್ಮಾಣ ನಿಗಮಕ್ಕೂ ರಸ್ತೆಗಳನ್ನು ಕೊಡರಿ ಎಂದು ಅನೇಕ ಸಲಹೆಗಳು ಬಂದಿವೆ. ಆದರೆ ತಮ್ಮ ಕ್ಷೇತ್ರದಲ್ಲಿ ಬೇಡ ಎಂದು ತಾವು ಹೇಳಿದರೆ ಅದಕ್ಕೆ ನಾವು ಸಮ್ಮತಿಸಿ ಆ ರಸ್ತೆಯ ಕಾಮಗಾರಿಗೆ ಟೆಂಡರ್ ಕೊಡುತ್ತೇವೆ.

ಇ. ಸಾಮೂಹಿಕ ವರ್ಗಾವಣೆ ಕುರಿತು.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಗೊಂದಲ ನಿರ್ಮಾಣವಾಗಿದೆ. ಅಧಿಕಾರಿಗಳಲ್ಲಿ ಗೊಂದಲ ನಿರ್ಮಾಣವಾಗಿದೆ. ಶಾಸಕರಲ್ಲೂ ಕೂಡ ಗೊಂದಲ ನಿರ್ಮಾಣವಾಗಿದೆ. ಏತಕ್ಕೆಂದರೆ ಶಾಸಕರ ಭವನದಲ್ಲಿ ದೊಡ್ಡ ಜಾತ್ರೆ, ಸಿರ್ಸಿ ಮಾರಿಕಾಂಬ ಜಾತ್ರೆಗಿಂತ ದೊಡ್ಡ ಸಂತೆಯಾಗಿದೆ. ಯಾವನೇ ಶಾಸಕ ಇವತ್ತು ಊರಿನಲ್ಲಿದ್ದರೆ ಬೆಳಗಿನಿಂದ ಸಂಜೆವರೆಗೆ ವರ್ಗಾವಣೆಗೆ ಶಿಫಾರಸ್ ಪತ್ರ ಕೊಡಿ ಎಂದು ಬೆಳಗಾಂನಿಂದ ಇಲ್ಲಿಯವರೆಗಿನ ಜನ ಬರುತ್ತಾರೆ. ಯಾವ ಕಚೇರಿಗೆ ಹೋದರೂ ಅಧಿಕಾರಿಗಳಿರುವುದಿಲ್ಲ, ಎಲ್ಲಿಗೆ ಹೋದರು ಅಂದರೆ ಸಚಿವರ ಶಿಫಾರಸ್ ಪತ್ರ ತರಲು ಹೋಗಿದ್ದೇವೆ ಎನ್ನುತ್ತಾರೆ. ಮುಖ್ಯಮಂತ್ರಿಗಳು ಸಾಮೂಹಿಕ ವರ್ಗಾವಣೆ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ, ಅದರಲ್ಲಿ ನಿರ್ದಿಷ್ಟ ಧೋರಣೆಗಳನ್ನು ನಮೂದಿಸಿಲ್ಲ. ಬೇರೆ ಬೇರೆ ಸಚಿವರು ಅಧಿಕಾರಿಗಳು ವರ್ಗಾವಣೆ ಬಗ್ಗೆ ಬೇರೆಬೇರೆ ಮಾತುಗಳನ್ನಾಡುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರಲ್ಲಿ ಗೊಂದಲವಾಗಿದೆ. ಇಡೀ ರಾಜ್ಯದಲ್ಲಿ ಅಧಿಕಾರಿಗಳು ಇಲಾಖೆಯಲ್ಲಿರದೆ ಶಾಸಕರ ಹಿಂದೆಯೊ ಸಚಿವರ ಹಿಂದೆಯೋ ತಿರುಗಾಡಿ ಆಡಳಿತ ವ್ಯವಸ್ಥೆ ಹದಗೆಟ್ಟಿದೆ. ವರ್ಷಾಂತ್ಯದಲ್ಲಿ ಇಂತಹ ಕಾಮಗಾರಿಗಳೇನಾಗಬೇಕೆಂದು ನಾವು ಹೇಳುತ್ತೇವೆ ಅಧಿಕಾರಿಗಳು ವರ್ಗಾವಣೆಗಾಗಿ ತಿರುಗಾಡುವುದರಿಂದ ಆ ಕೆಲಸಗಳು ಆಗುತ್ತಿಲ್ಲ. ಇವತ್ತು ವರ್ಗಾವಣೆ ರಾಜಕೀಯಕರಣವಾಗುತ್ತಿದೆ. ಪ್ರತಿಯೊಬ್ಬನೂ ಯಾವುದೋ ದುಂಬಾಲಿಗೆ ಬಿದ್ದು ಅವನ ಹಿಂದೆ ಹೋಗುವ ಪರಿಸ್ಥಿತಿ ಬಂದಿದೆ. ನಾಳೆ ವರ್ಗವಾದ ಮೇಲೆ ಯಾವನೋ ಒಬ್ಬ ವರ್ಗ ಮಾಡಿಸಿದ ಎಂದು ಅವನ ಮುಲಾಜಿಗೆ ಒಳಪಟ್ಟು ಅಧಿಕಾರಿ ಕೂಡ ಕರ್ತವ್ಯ ನಿರ್ವಹಣೆ ಮಾಡಲಾರದ ದೊಡ್ಡ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ವರ್ಗಗಳನ್ನು ಇಂತಹ